ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಓಎಸ್ 566/2015 ಡಿಡಬ್ಲ್ಯೂ-3

ದಿನಾಂಕಃ 16-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಮಾನ್ಯ ಶ್ರೀ.ಬಿಎಜಿ ವಕೀಲರಿಂದಃ--**

ಡಿಡಬ್ಲ್ಯೂ-2 ನನ್ನ ತಂದೆಯಾಗಬೇಕು. ತಮ್ಮೇಗೌಡರ ಮಗಳಾದ ಚಿಕ್ಕಮ್ಮ ರವರು ಚನ್ನವೀರೇಗೌಡರ ಮಗಳು ಚಿಕ್ಕಮ್ಮನ ವಿರುದ್ಧ ದಾವೆ ಹೂಡಿರುತ್ತಾರೆ. ವಾದಿ ಜಮೀನು ತಮ್ಮದೆಂದು ಈ ದಾವೆ ಹೂಡಿರುತ್ತಾರೆ. ಸರ್ವೇ ನಂ.146/11 ರಲ್ಲಿ 3 ಗುಂಟೆ ಜಮೀನು ಆಗಿರುತ್ತದೆ. ಸದರಿ ಆಸ್ತಿಯ ಬಗ್ಗೆ ನಾನು ದಾಖಲಾತಿ ನೋಡಿಲ್ಲ. ಹೊನ್ನಲಗೇಗೌಡರನ್ನು ನಾನು ನೋಡಿಲ್ಲ. ಅವರ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ. ಈರೇಗೌಡ, ತಮ್ಮೇಗೌಡ, ಚನ್ನವೀರೇಗೌಡ ಗೊತ್ತಿರುತ್ತಾರೆ. ಇವರುಗಳು ಹೊನ್ನೇಗೌಡರ ಮಕ್ಕಳು ಆಗಿರುತ್ತಾರೆ. ಈ ದಾವೆಯ ವಾದಿ ತಮ್ಮೇಗೌಡರ ಮಗಳಾಗಿರುತ್ತಾರೆ. ಪ್ರತಿವಾದಿ ಚಿಕ್ಕಮ್ಮ ಚನ್ನವೀರೇಗೌಡರ ಮಗಳಾಗಿರುತ್ತಾರೆ. ಇಬ್ಬರು ಚಿಕ್ಕಮ್ಮನವರ ಗಂಡಂದಿರ ಹೆಸರು ಸಿದ್ದೇಗೌಡ ಆಗಿರುತ್ತಾರೆ. ಚನ್ನವೀರೇಗೌಡರ ಮಗಳಾದ ಚಿಕ್ಕಮ್ಮ ರವರನ್ನು ಸಾದೊಳಲು ಗ್ರಾಮಕ್ಕೆ ವಿವಾಹ ಮಾಡಿಕೊಡಲಾಗಿರುತ್ತದೆ. ನನ್ನ ತಾತನ ಹೆಸರು ಈರೇಗೌಡ. ಸರ್ವೇನಂ.149, ಸರ್ವೇನಂ.146 ರಲ್ಲಿ ನಮಗೆ ಭಾಗ ಬಂದಿರುತ್ತದೆ. ಸರ್ವೇನಂ.146 ರಲ್ಲಿ 6 ಎಕರೆ 20 ಗುಂಟೆ ಜಮೀನು ಇರುತ್ತದೆ. ಅದರಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಆಸ್ತಿ ಬಂದಿದೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಈರೇಗೌಡ, ತಮ್ಮೇಗೌಡ, ಚನ್ನವೀರೇಗೌಡ ರವರಿಗೆ ಭಾಗಾಂಶ ಇದೆ ಎಂದರೆ ಸರಿ.

ಚನ್ನವೀರೇಗೌಡ ಸರ್ವೇನಂ.146/13, 14, 15, 11 ರಲ್ಲಿ 31 ಗುಂಟೆ ಜಮೀನಿನಲ್ಲಿ ಸ್ವಾದೀನದಲ್ಲಿದ್ದಾರೆ. ಈ ಜಮೀನುಗಳು ಅಕ್ಕಪಕ್ಕದಲ್ಲಿರುತ್ತದೆ. ಸರ್ವೇನಂ.146/11 ರಲ್ಲಿ 3 ಗುಂಟೆ ಇರುತ್ತದೆ. ತಮ್ಮೇಗೌಡರಿಗೆ ಸರ್ವೇನಂ.146/19 ರಲ್ಲಿ 28 ಗುಂಟೆ ಹೋಗಿದೆ. ಅದರ ಚಕ್ಕುಬಂಧಿ ಪೂ- ರಸ್ತೆ, ಪ-ನನ್ನ ಬಾಬ್ತು ಜಮೀನ, ಉ- ಚಿಕ್ಕಮ್ಮ ರವರ ಜಮೀನು, ದ- ನಮ್ಮದೇ ಜಮೀನು ಇರುತ್ತದೆ. ಆರ್ ಟಿಸಿ ಆಧಾರದ ಮೇಲೆ ಮೇಲ್ಕಂಡ ವಿಸ್ತೀರ್ಣವನ್ನು ಹೇಳುತ್ತಿದ್ದೇನೆ. ವಿಭಾಗದ ಬಗ್ಗೆ ನಮಗೆ ಮಾಹಿತಿ ಇಲ್ಲ. ಜಮೀನು ಗೆಜ್ಜಲಗೆರೆ ಗ್ರಾಮದಲ್ಲಿದೆ. ಪ್ರತಿವಾದಿ ಚಿಕ್ಕಮ್ಮನ ಮಗಳನ್ನು ಅವರ ತಮ್ಮನಾದ ಶೇಖರ್ ರವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಪ್ರತಿವಾದಿ ಚಿಕ್ಕಮ್ಮ 3 ಗುಂಟೆ ಆಸ್ತಿಯನ್ನು ಸರ್ವೇನಂ.146/11 ರಲ್ಲಿ ತನ್ನ ತಮ್ಮನಿಗೆ ದಾನ ಪತ್ರ ಮಾಡಿರುತ್ತಾರೆ. ಆ ಪತ್ರದ ವ್ಯವಹಾರಕ್ಕೆ ನಾನು ಸೇರಿರುತ್ತೇನೆ. ದಾನಪತ್ರ ಮಾಡಲು ಆರ್ ಟಿಸಿ,

ಎಂಆರ್, ಇಸಿ ನ್ನು ತಂದಿದ್ದರು. ಆ ದಾನ ಪತ್ರ ಬರೆಯುವ ಸಮಯದಲ್ಲಿ ಪ್ರತಿವಾದಿ ಚಿಕ್ಕಮ್ಮ ರವರ ಹೆಸರಿನಲ್ಲಿತ್ತು. ನನಗೆ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಅನುಭವ ಇಲ್ಲ. ಪತ್ರ ನೊಂದಣಿಯಾಗುವಾಗ ಆರ್ ಟಿಸಿ, ಎಂಆರ್, ಇಸಿ ಮತ್ತು ವಂಶವೃಕ್ಷವನ್ನು ಕೊಡುತ್ತಾರೆ. ನಿಪಿ-25 ರ ವಂಶವೃಕ್ಷವನ್ನೇ ಆ ದಿನ ನೊಂದಣಿಗೆ ಕೊಡಲಾಗಿತ್ತು. ಪ್ರತಿವಾದಿ ಚಿಕ್ಕಮ್ಮ ರವರ ಸಾದೊಳಲು ಗ್ರಾಮದಲ್ಲಿ ವಾಸವಾಗಿರುತ್ತಾರೆ. ವಾದಿ ಚಿಕ್ಕಮ್ಮ ಗೆಜ್ಜಲೆಗೆರೆಯಲ್ಲಿರುತ್ತಾರೆ. ನಿಪಿ-14 ಪ್ರತಿವಾದಿಯ ಚಿಕ್ಕಮ್ಮ ರವರ ಚುನಾವಣಾ ಗುರುತಿನ ಚೀಟಿ ಎಂದರೆ ಸರಿ. ನಾನು, ಪ್ರತಿವಾದಿ ಚಿಕ್ಕಮ್ಮ, ಶೇಖರ ರವರುಗಳು ಸೇರಿಕೊಂಡು ವಾದಿ ಚಿಕ್ಕಮ್ಮನಿಗೆ ಸೇರಿದ ಆಸ್ತಿಯನ್ನು ಅಕ್ರಮವಾಗಿ ದಾನಪತ್ರ ಮಾಡಿರುತ್ತೇವೆಂದರೆ ಸರಿಯಲ್ಲ. ಸುಳ್ಳು ವಂಶವೃಕ್ಷ ಕೊಟ್ಟು ನಾವು ಮೋಸ ಮಾಡಿರುತ್ತೇವೆಂದರೆ ಸರಿಯಲ್ಲ. ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ದಾನಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಸರ್ವೇ ನಂ.146/11 ರಲ್ಲಿ ಪ್ರತಿವಾದಿ ಚಿಕ್ಕಮ್ಮನಿಗೆ ಅಥವಾ ಅವರ ತಂದೆಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಂದಿಗೂ ಸಹ ವಾದಿಯ ಮಗನೇ ಸ್ವಾದೀನದಲ್ಲಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯ ಮಗ ಸಿದ್ದರಾಮು ತೆಂಗಿನ ಸಸಿ ನೆಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ತೆಂಗಿನ ಸಸಿಯನ್ನು ನಾನು ಇತರ ಪ್ರತಿವಾದಿಗಳ ಜೊತೆ ಸೇರಿಕೊಂಡು ಕಿತ್ತು ಹಾಕಿದ್ದೆ ಆ ಬಗ್ಗೆ ದೂರು ದಾಖಲಾಗಿದೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ವಾದಿಯ ಮಗನ ಜೊತೆ ದ್ವೇಷ ಇರುವುದರಿಂದ ಅವರ ಆಸ್ತಿಯನ್ನು ಅಕ್ರಮವಾಗಿ ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

**ಸಾಕ್ಷಿಯ ಸಹಿಃ**